# ಅನಿಕೇತನ ANIKETANA

ಡಾ ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ

Dr. Manmohan Singh Bengaluru City University

ಆಗು ನೀ ಅನಿಕೇತನ

BE BOUNDLESS

ಸಂಪುಟ 01 | ಸಂಚಿಕೆ 12 | ಬೆಂಗಳೂರು | October 2026 | ಪುಟ 01

Monthly Campus Newsletter by the Department of Mass Communication and Journalism. (For Private Circulation Only)




# Dr. Manmohan Singh's 94th Birth Anniversary

Dr.Manmohan Singh Bengaluru City University, Department of Studies and Research in Economics celebrated 94th birth anniversary of Dr. Manmohan Singh on 26th September 2026 at Jnana Jyothi Auditorium, Central College Campus.

Chief Guest Dr. Krishna Raj, Head and RBI Chair Professor, Centre for Economic Studies and Policy, ISEC, Bengaluru, remembered the contributions of Dr.Manmohan Singh to Indian Economy during its critical time in multiple ways through his revolutionary reforms as a Finance Minister of the nation.

He threw open the doors of our economy to the globe through his policy of LPG under his New Economic Policy Reforms. Mahatma



*Chief Guest Dr. Krishna Raj with Vice Chacellor Prof. Ramesh B, Faculties, Members of Synicate and Academic Council*

Gandhi NREGA, RTE, RTI, are some of his distinct reforms which revived the Indian Economy- Prof. Krishna Raj narrated. He solicited to confer the most prestigious "Bharat Ratna" to Dr.Singh posthumously.

Vice-Chancellor Prof. Ramesh B. in his presidential address, highlighted the role and contributions of Dr. Manmohan Singh not only as a minister and Prime minister but more as an educationist and a researcher. He also announced about Dr. Manmohan Singh Chair to be launched in the University and which has been approved by the Government of Karnataka.

Registrar (Evaluation) Prof. Ramesh .B. Kudenatti, Syndicate members, Academic Council members, Deans, Heads of the departments, Co-ordinator-IQAC along with the teaching and non-teaching staff were present. Students of various faculties and affiliated colleges of the University attended the function.

Prof.Jyothi Venkatesh Dean of Arts faculty recalled her close association with Dr. Mnanmohn Singh's family. .Prof. Ritika Sinha, Chairperson of Economics Department delivered introductory remarks. Dr. Rashmi introduced the Chief Guest and Dr. Deeksha.S. compered the programme. Dr. Balaji co-ordinated the event.

In commemoration of 94th birth anniversary of Dr.Manmohan Singh, Department of Economics conducted Quiz, Collage making, Elocution and Reels making competitions on 23rd and 24th of September, 2026. Dr. Rohini V.S. announced the results and winners of the competitions were rewarded with prizes and certificates.

Team Billion Brains, Harish Kumar and Ume Nabiha from Department of Commerce won first prizes in Quiz, reels making and elocution respectively. Team RR of Department of Economics won first prize for collage making. Students from Jyothi Nivas College and University College for Women, Malleswaram also won prizes in various competitions.

**-Dr. Rohini, V S**

Faculty, Dept. of Economics.

# ಉನ್ನತ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ತುರ್ತು ಕ್ರಮ ಅಗತ್ಯ



ಶಿಕ್ಷಣ ತಜ್ಞರಾದ ಪ್ರೊ.ಟಿ.ಡಿ. ಕೆಂಪರಾಜುರವರಿಗೆ ಕುಲಪತಿಗಳು, ಕುಲಸಚಿವರು (ಮೌ) ಇಂದ ಸನ್ಮಾನ

ಉನ್ನತ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಸರ್ಕಾರ ತ್ವರಿತ ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಾಗೂ ಶಿಕ್ಷಣ ತಜ್ಞರಾದ ಪ್ರೊ.ಟಿ.ಡಿ. ಕೆಂಪರಾಜು ಎಚ್ಚರಿಕೆಯ ಗಂಟೆ ಬಾರಿಸಿದ್ದಾರೆ. ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಂತರಿಕ ಗುಣಮಟ್ಟ ಖಾತರಿ ಘಟಕದ ವತಿಯಿಂದ ಸೆಪ್ಟಂಬರ್ 5ರಂದು ಏರ್ಪಡಿಸಲಾಗಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯಾನಂತರ ಭಾರತ ದೇಶದಲ್ಲಿ ಸಾಕ್ಷರತೆ ಪ್ರಮಾಣ ಗಣನೀಯವಾಗಿ ಹೆಚ್ಚಳವಾಗಿದ್ದರೂ ಉನ್ನತ ಶಿಕ್ಷಣ ರಂಗದ ದಾಖಲಾತಿ ಪ್ರಗತಿ ಅಷ್ಟೇನೂ ತೃಪ್ತಿಕರವಾಗಿಲ್ಲವೆಂದು ಅವರು ವಿಶ್ಲೇಷಿಸಿದರು. ದೇಶದಲ್ಲಿ ವಿಶ್ವವಿದ್ಯಾಲಯಗಳ ಸಂಖ್ಯೆ 1200 ಹಾಗೂ ಕಾಲೇಜುಗಳ ಸಂಖ್ಯೆ 40 ಸಾವಿರ ದಾಟಿ–ದ್ದರೂ ವಿದ್ಯಾರ್ಥಿಗಳ ಪ್ರವೇಶದ ಪ್ರಮಾಣ ಕೇವಲ ಶೇ.38ರಷ್ಟಿದೆ. ಅಷ್ಟೇ ಅಲ್ಲದೆ ಭಾರತದಲ್ಲಿ ವಿಶ್ವದರ್ಜೆಯ ಮಟ್ಟದ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಅತ್ಯಲ್ಪವಾಗಿದೆ ಎಂದು ಅವರು ವಿವರಿಸಿದರು.

ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶಾತಿ ಕ್ರಮೇಣ ಕುಸಿಯತೊಡಗಿದ್ದು ಖಾಯಂ ಅಧ್ಯಾಪಕರ ಕೊರತೆ ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟದ ಗಂಭೀರ ಹಿನ್ನಡೆಗೆ ಕಾರಣವಾಗಿದೆ ಎಂದು ಅವರು ವಿಷಾದಿಸಿದರು. ಖಾಸಗಿ ಮತ್ತು ವಿದೇಶಿ ವಿವಿಗಳಿಂದ ಪೈಪೋಟಿ ಎದುರಿಸುತ್ತಿರುವ ಸಾರ್ವಜನಿಕ ವಿಶ್ವವಿದ್ಯಾಲಯಗಳನ್ನು ಸಶಕ್ತಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕೆಂದು ಅವರು ಸಲಹೆಯಿತ್ತರು.

ಮೈಸೂರು ವಿಶ್ವವಿದ್ಯಾಲಯದಲ್ಲೂ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದ ಶಿಕ್ಷಕರಾಗಿ ದೇಶದ ಅತ್ಯುನ್ನತ ಪದವಿಯಾದ ರಾಷ್ಟ್ರಪತಿ ಸ್ಥಾನಕ್ಕೇರಿದ ಸರ್ವಪಲ್ಲಿ ರಾಧಾಕೃಷ್ಣನ್‌ರವರ ಆದರ್ಶ ಮಾರ್ಗದಲ್ಲಿ ಮುನ್ನಡೆದು ಯುವಶಕ್ತಿಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಅವರು ಉಪನ್ಯಾಸಕರನ್ನು ಪ್ರೇರೇಪಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್. ಬಿ. ಮಾತನಾಡಿ, 1858ರಲ್ಲಿ ಸ್ಥಾಪಿತವಾದ ಸೆಂಟ್ರಲ್ ಕಾಲೇಜಿನ ಭವ್ಯ ಪರಂಪರೆಯನ್ನು ಮುಂದುವ–ರಿಸುವ ಸಂಕಲ್ಪ ಕೈಗೊಳ್ಳುವಂತೆ ಅಧ್ಯಾಪಕರನ್ನು ಉತ್ತೇಜಿಸಿದರು.

## ಶಿಕ್ಷಕರ ದಿನಾಚರಣೆ

ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ.ಬಿ.ಕುಡೇನಟ್ಟಿ, ವಿತ್ತಾಧಿಕಾರಿಗಳಾದ ಎಂ.ವಿ. ವಿಜಯಲಕ್ಷ್ಮಿ, ಸಿಂಡಿಕೇಟ್ ಸದಸ್ಯರಾದ ಡಾ. ಮಹಂತಗೌಡ, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ಡಾ. ಚಮನ್ ಫರ್ಜಾನ, ಹಿರಿಯ ಪ್ರಾಧ್ಯಾಪಕರಾದ ಪ್ರೊ. ಜ್ಯೋತಿ ವೆಂಕಟೇಶ್, ಪ್ರೊ. ಕೆ.ಆರ್. ಜಲಜಾ, ಪ್ರೊ.ಪಿ.ಆರ್. ಚೇತನ, ಪ್ರೊ. ಮೇಧಾ ಇಟಗಿ ಹುಯಿಲಗೋಳ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಕೃತಿಕಾ ಸ್ವಾಗತಿಸಿ ಹಫೀಜಾ ವಂದಿಸಿದರು. ವೈಷ್ಣವಿ ಅತಿಥಿಗಳನ್ನು ಪರಿಚಯಿಸಿದರು. ಚರಣ್ ಕಾರ್ಯಕ್ರಮ ನಿರೂಪಿಸಿದರು. ಕುಮಾರಿ ಪದ್ಮಿನಿ ಗುರವಂದನೆ ಗೀತೆಯನ್ನು ಹಾಡಿದರು.

# Language Lab training

Dr.MSBCU has established English Language Lab for the benefit of UG and PG students. This initiative aims to strengthen students' English language proficiency and provide a technology-enabled environment for practical, interactive, and learner-centred language learning.

The laboratories complement classroom teaching through the effective use of digital, audio, and visual resources and provide opportunities for students to practise language skills in a systematic and engaging manner.

As a first step of this venture, Language Lab training programme was organised for teaching faculty from 10th to 12th September, 2026. Faculty of Commerce and Management, Faculty of Arts, Faculty of Science and Technology and Faculty of Global Languages participated in the programme.

Resource persons conducted interactive workshops covering classroom speaking activities, practical pronunciation drills, lesson-planning for language support across disciplines, and techniques to boost students' academic communication.

Faculty participants engaged in role-plays, micro-teaching demonstrations, and peer feedback sessions tailored to their disciplinary needs. Language Lab training is part of Dr.MSBCU's ongoing efforts to enhance teaching effectiveness and student employability through improved communication skills.

**- Dr. Srinivas, Faculty,** MCJ

# ಚುನಾವಣಾ ಕ್ಷೇತ್ರ ಪುನರ್ ವಿಂಗಡಣೆ–2027 ರಾಷ್ಟ್ರೀಯ ವಿಚಾರಸಂಕಿರಣ



ಕೃಷಿ ಸಚಿವ ಪಿ.ಎಂ. ನರೇಂದ್ರ ಸ್ವಾಮಿ, ಪುರುಷೋತ್ತಮ್ ಬಿಳಿಮಲೆ ಹಾಗೂ ಇತರೆ ಗಣ್ಯರು ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿದರು

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ವತಿಯಿಂದ "ಚುನಾವಣಾ ಕ್ಷೇತ್ರ ಪುನರ್ ವಿಂಗಡಣೆ–2027: ಪ್ರಜಾಪ್ರಭುತ್ವ, ಒಕ್ಕೂಟ ವ್ಯವಸ್ಥೆ, ಸಾಮಾಜಿಕ ನ್ಯಾಯ ಮತ್ತು ಕರ್ನಾಟಕದ ಭವಿಷ್ಯ" ಎಂಬ ವಿಷಯದ ಕುರಿತ ರಾಷ್ಟ್ರೀಯ ವಿಚಾರಸಂಕಿರಣವನ್ನು ಆಯೋಜಿಸಲಾಗಿತ್ತು.

ಕುಲಪತಿ ಪ್ರೊ.ರಮೇಶ್.ಬಿ.ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮವನ್ನು ಕೃಷಿ ಸಚಿವರಾದ ಪಿ.ಎಂ. ನರೇಂದ್ರ ಸ್ವಾಮಿ ಉದ್ಘಾಟಿಸಿದರು. ಕೇಂದ್ರ ಸರ್ಕಾರ 2011ರ ಜನಗಣತಿ ಆಧಾರದ ಮೇಲೆ ರೂಪಿಸಿರುವ ಕ್ಷೇತ್ರಗಳ ಮರುವಿಂಗಡಣೆ ಮಸೂದೆ ದ್ವಂದ್ವದಿಂದ ಕೂಡಿದ್ದು ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳಿಗೆ ಪ್ರತಿಕೂಲವಾಗಿದೆ ಎಂದು ಸಚಿವರು ವಿಶ್ಲೇಷಿಸಿದರು.

ದೇಶದ ಯುವ ಪೀಳಿಗೆಯ ಕನಸುಗಳಿಗೆ ತಣ್ಣೀರೆರೆಚುತ್ತಿರುವ ಕೇಂದ್ರ ಸರ್ಕಾರ ಇದೀಗ ಒಕ್ಕೂಟ ವ್ಯವಸ್ಥೆ ಮತ್ತು ಸಂವಿಧಾನದ ಸ್ವರೂಪವನ್ನು ತಿರುಚುವ ಮೂಲಕ ಪ್ರಶ್ನಾತೀತ ರಾಜಕೀಯ ಪ್ರಾಬಲ್ಯ ಸಾಧಿಸಲು ಹವಣಿಸುತ್ತಿದೆ ಎಂದು ಅವರು ಟೀಕಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗೆ ಕರ್ನಾಟಕ ಸರ್ಕಾರ ರೂಪಿಸಿರುವ ಪ್ರತ್ಯೇಕ ಅನುದಾನ ವ್ಯವಸ್ಥೆಯನ್ನೂ ಕೇಂದ್ರ ಸರ್ಕಾರವೂ ಜಾ–ರಿಗೊಳಿಸಿ ಸಾಮಾಜಿ–ಕ ನ್ಯಾಯದ ಬದ್ಧತೆಯನ್ನು ಪ್ರದರ್ಶಿಸಬೇಕೆಂದು ಅವರು ಆಗ್ರಹಪಡಿಸಿದರು.

ದಿಕ್ಸೂಚಿ ಭಾಷಣ ಮಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ.ಪುರುಷೋತ್ತಮ ಬಿಳಿಮಲೆಯವರು ಸಂವಿಧಾನ ದತ್ತವಾದ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಯನ್ನು ಕೇಂದ್ರದ ಆಡಳಿತಾರೂಢ ಪಕ್ಷ ತನ್ನ ರಾಜಕೀಯ ಲಾಭಕ್ಕಾಗಿ ದುರುಪಯೋಗ ಮಾಡಿಕೊಳ್ಳಲು ಮುಂದಾಗಿದೆ ಎಂದು ಟೀಕಿಸಿದರು.

ಸಾರ್ವಜನಿಕ ಚರ್ಚೆಗೆ ಸಾಕಷ್ಟು ಅವಕಾಶ ನೀಡದೆ ಏಕಪಕ್ಷೀಯ ನಿರ್ಧಾರವನ್ನು ಹೇರಲಾಗುತ್ತಿದ್ದು ಜನನ ಪ್ರಮಾಣ ನಿಯಂತ್ರಣ ಯೋಜನೆಯನ್ನುಪರಿಣಾಮಕಾ–ರಿಯಾಗಿ ಅನುಷ್ಠಾನಗೊಳಿಸಿದ ದಕ್ಷಿಣದ ರಾಜ್ಯಗಳಿಗೆ ಇದು ಮುಳುವಾಗಲಿದೆ ಎಂದು ಅವರು ಎಚ್ಚರಿಸಿದರು.

ಕೇಂದ್ರ ಚುನಾವಣಾ ಆಯೋಗ ಎಸ್ಐಆರ್ ಹೆಸರಿನಲ್ಲಿ ಕೋಟ್ಯಂತರ ಮತದಾರರನ್ನು ಪಟ್ಟಿಯಿಂದ ಕೈಬಿಟ್ಟಿದ್ದು ಮತದಾನದ ಹಕ್ಕನ್ನು ಮೊಟಕುಗೊಳಿಸಿ ಅನ್ಯಾಯವೆಸಗಿದೆ ಎಂದು ಅವರು ವಿಷಾದಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿಧಾನ ಪರಿಷತ್ತಿನ ಸದಸ್ಯರಾದ ಕೆ. ಶಿವಕುಮಾರ್ ಜಾತಿಗಣತಿ ಜನಗಣತಿಯ ಭಾಗವಾಗಿ ಶೋಷಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ದೊರೆಯುವಂತಾಗಬೇಕೆಂದು ಅಭಿಪ್ರಾಯಪಟ್ಟರು.

ಅಂತೆಯೇ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ಮಹಿಳೆಯರಿಗೂ ಶೀಘ್ರವಾಗಿ ಸೂಕ್ತ ರಾಜಕೀಯ ಪ್ರಾತಿನಿಧ್ಯ ಲಭಿಸಬೇಕೆಂದು ಅವರು ಒತ್ತಾಯಿಸಿದರು.

ಮಾಜಿ ರಾಜ್ಯಸಭಾ ಸದಸ್ಯರಾದ ಡಾ.ಎಲ್. ಹನುಮಂತಯ್ಯ 'ಸಾಮಾಜಿ–ಕ ನ್ಯಾಯ ಮತ್ತು ಕ್ಷೇತ್ರ ಪುನರ್ ವಿಂಗಡಣೆ' ಹಾಗೂ ಹಿರಿಯ ಪತ್ರಕರ್ತರಾದ ದಿನೇಶ್ ಅಮೀನಮಟ್ಟು "ಪ್ರಜಾಪ್ರಭುತ್ವ ಮತ್ತು ಕ್ಷೇತ್ರ ಪುನರ್ ವಿಂಗಡಣೆ" ಎಂಬ ವಿಷಯಗಳ ಕುರಿತು ವಿಚಾರ ಮಂಡಿಸಿ ಸಂವಾದ ನಡೆಸಿದರು.

ನಿವೃತ್ತ ಸಮಾಜಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ. ಸಿ.ಜಿ. ಲಕ್ಷ್ಮೀಪತಿ ಪ್ರಾಸ್ತಾವಿಕ ಭಾಷಣ ಮಾಡಿದರು. ವಿಧಾನ ಪರಿಷತ್ತಿನ ಸದಸ್ಯರಾದ ಸುಧಾಮದಾಸ್, ಕುಲಸಚಿವರಾದ (ಮೌಲ್ಯಮಾಪನ) ಪ್ರೊ.ರಮೇಶ್.ಬಿ. ಕುಡೇನಟ್ಟಿ. ಸಿಂಡಿಕೇಟ್ ಸದಸ್ಯರಾದ ಶಿಲ್ಪಶ್ರೀ. ಡಾ. ಎಚ್. ಕೃಷ್ಣರಾಮ್, ಆಯಿಷಾ ಫರ್ಜಾನ, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ಡಾ.ಜಿ.ಕೃಷ್ಣಮೂರ್ತಿ, ಡಾ. ಚಮನ್ ಫರ್ಜಾನ ಉಪಸ್ಥಿತ–ರಿದ್ದರು.

# New Students Orientation Programme




*Dignitaries on stage with Vice Chancellor - Induction Programme*

Dr.MSBCU organised its Induction Programme for the First Semester UG and PG Students for the Academic Year 2026–27 at the Jnanajyothi Auditorium, Central College Campus on 17th Sept. 2026.

The event was kick-started with the the introductory address by Dr. Thandava Gowda T.N., Director, IQAC. The inaugural address by H. P. Sudham Das, MLC provided the students with valuable perspectives as they embarked upon their university journey. This was followed by an engaging address by A. H. Sagar, Educationalist and FDP Expert, whose interaction with the students became one of the highlights of the event. The students were deeply engrossed and actively interactive throughout his induction and motivational session, responding enthusiastically to his ideas and reflections.

The Presidential remarks by Vice-Chancellor Prof. Ramesh B. placed special emphasis on the responsibility that accompanies becoming a student of the prestigious University of the state to become ambassadors and role models of the University, drawing inspiration from the distinguished alumni associated with the campus.

An important orientation session on "Know Your University and Governance" was delivered by Dr.Nirmala M., Dean, Faculty of Commerce and Management, giving an overview of the University, its academic ecosystem and governance framework.

The Centre for Global Languages faculty Dr Shravya and Dr Sujatha introduced students to opportunities for foriegn languages . The afternoon session featured an interactive workshop conducted by Reach Much Higher.

**-Dr Deeksha S**
Faculty Dept.of Commerce

# JET Programme Seminar



*CGL Team with Mr. Kobayashi Takashi, First Secretary, Embassy of Japan*

The Centre for Global Languages, Dr.MSBCU successfully organised a seminar on the JET (Japan Exchange and Teaching Programme-Assistant Language Teacher) in Japan on 16th Sept 2026 Mr. Kobayashi Takashi, First Secretary, Embassy of Japan, was the Chief Guest. Mr. Takashi also addressed the gathering on the JET Programme, its opportunities for teaching English in Japan. The session also explained the various stages of the application and recruitment process, the role and responsibilities of Assistant Language Teachers, the benefits of participating in the programme, and details regarding the remuneration and pay scale.

The programme served as a valuable platform for creating awareness about international career opportunities and furthering academic and cultural exchange between India and Japan.

**-Dr.Shravya Mouli,**
**Faculty, CGL**

# Principals' Conclave and Felicitation

The Planning, Monitoring and Evaluation Board (PMEB), Dr.Manmohan Singh Bengaluru City University, in association with Dr.MSBCU Principals' Association,organised Principals' Conclave and Felicitation Ceremony on 18-09-2026, at Jnana Jyothi Auditorium.

The programme commenced with introductory address by Dr. R. Parvathi, President, Dr. MSBCU Principals' Association. The event was presided over by Prof. Ramesh B., Vice Chancellor. The Chief Guest, Dr. Karisiddappa, VTU Former Vice Chancellor, spoke about the changing landscape of the education system and emphasised the need for educational institutions and their leaders to continuously adapt to the dynamic nature of higher education.

This was followed by an engaging and thought-provoking session by A. H. Sagar, who focused on effective leadership and interpersonal skills for principals. A significant highlight of the programme was the felicitation of distinguished retired principals, recognising their years of dedicated service and contribution to the field of higher education. The retired principals felicitated included Dr. M. Jayappa, Dr. Eshwar Reddy, Dr. B. G. Bhaskar, Prof. G. Ramaiah, Dr. H. Prakash, Dr. B. Chandrashekar, Dr. Venugopal G., Dr. Janardhan T. G., Dr. Suhail Iqbal, Dr. Nanda and Dr. Shivalingaiah C.



*Chief Guest Dr. Karisidappa Inagurating the Conclave along with VC, RE and FO*

# Inter - College Interaction Programme



*Loyala College, Chennai Student's Academic visit to CGL. Dr.MSBCU*

The Centre for Global Languages, hosted its first-ever Academic visit and interaction Programme with Loyola College, Chennai, on 10 Sept. The programme brought together enthusiastic students from both institutions for a day filled with interaction, discoverycreativity.

Adding to the significance of the day, students also had the opportunity to interact with the VC, Prof. B. Ramesh. As the day drew to a close, the winning teams were presented with shiny trophies, bringing an exciting finale to a day packed with discovery and creativity.

# FDP on Design Thinking Approach




*Participants of Design Thinking FDP with VC Prof. Ramesh B*

The Skill development and Placement Centre, Dr.MSBCU in association with Reach Much Higher (RMH) and Intel, organized a Faculty Development Programme (FDP) on the topic *"Design Thinking Approach – Understanding, Profiling, Mentoring and Supporting Students"* on 10th sept. 2026.

Dr.O.P.Goel, Founder, RMH, in his introductory address highlighted the rapidly changing landscape of education and observed that education globally is moving towards a "Robot Era" wherein several educational institutions in other countries have already begun exploring and implementing robots in classrooms to support formal education and teaching.

He emphasized that, in the era of Artificial Intelligence (AI), the role of teachers and professors is undergoing a significant transformation.

Inaugurating the event Vice-Chancellor Prof. Ramesh. B, emphasized that the primary purpose of the programme is to enhance the knowledge, skills, and professional capabilities of faculty members. He urged all the faculty members to make effective use of the learning and training provided through the FDP. He further stressed that they should also guide, mentor, and counsel students on a regular basis.

Dr. Pramod, Resource Person from RMH, began the session with an introduction to the importance of technical skills in teaching and learning, followed by an overview of the history and evolution of Design Thinking and its growing need and relevance in the present educational environment.

As part of the experiential learning component, a tower-building activity using newspapers was conducted. The activity encouraged faculty members to think creatively and come up with innovative and practical solutions using limited resources. The session concluded with a practical exercise on student profiling using Microsoft Excel.

A training materials kit was distributed to all participating faculty members. Prof. Ritika Sinha, Director, Skill development and Placement Centre; Dr. Nirmala. M., Dean, School of Management Studies; Mr. Prabhu and Mr. Gaurav (RMH); Mr. Harsha (TPO) participated in the programme. Ms.Vanishri, MSW, welcomed the gathering.

The University has planned 20 hour FDP on Design Thinking.

**- Sushhma Sharma**

# Visit to NGMA by Students




*Students of I B.A with faculty*



*Threat - Aparna Caur*

1st Yr B.A. (French, Social Work and Journalism) students along with Faculty Dr. Shravya Mouli (CGL), visited the National Gallery of Modern Art (NGMA), Bengaluru, on 19th of September During the visit, they had the opportunity to observe a exhibits on the theme *"Motherhood: Visual Culture, Care and Wellbeing"*.

As part of the exhibition *"One Mother, Many Mother Tongues"*. The exhibition also features the world renowned Italian Renaissance painter Sandro Botticelli's *"The Madonna with Child"* . ***"Threat"*** **by Arpana Caur**

The painting *"Threat"* by Arpana Caur was a special attraction. Arpana Caur is an Indian artist known for works exploring human life, women, time, violence, the environment and social concerns. Her use of strong colors and symbolic imagery make her paintings thought-provoking. This visit was a memorable experience which made us understand that an artwork can communicate an idea without using words. "Threat" encouraged me to look carefully, think about its symbols and form my own understanding.

**Md. Mustaqi** 1st Yr B.A (SJF)

# 'We See'- Social Work Workshop

As a part of Induction and Orientation to MSW Course Curriculum for 1st Year Students, a two-day special workshop was organized by the Department of Social Work of Dr. MSBCU at the New Academic Block, Seminar Hall on 8th & 9th September, 2026.

Inaugurating the workshop, Vice-Chancellor Prof. Ramesh B. described that the role of social workers is very significant in social transformation and encouraged students to contribute to nation-building along with personality development.

He proudly stated that the Department of Social Work, which was started in 1968 in the Prasanna Kumar Block of Central College, has now developed into a high calibre centre for study and research.

Prof. Ramesh B., who is himself an expert in Social Work education, described that Social Work is a noble profession of social service and social responsibility. He advised the students to work for the upliftment of society.

Chief Guest, Senior Professor from Kuvempu University, Prof. Prashanth G. Nayak analyzed that there is an inseparable link between the philosophy of literature and the practicality of social work.

Prof. Janardhan, Head of the Department of Psychiatric Social Work, NIMHANS, Director of Prasaranga, Dr.T.N. Tandavagowda were present as guests of the program. Prof. Ritika Sinha presided over the function.

Prof. Ramesh B. was felicitated on this occasion for successfully completing one year of service as a dynamic Vice Chancellor,. The Calendar Events for MSW 2026-27 was issued by the Vice-Chancellor. Faculty member Vikram.K. presented the annual activity report. Student Maziha compered the programme. Dr.Lakshmirangaiah proposed the vote of thanks.

**Technical Sessions**

In the Technical Session on Mental Health, Prof. Janardhan, HOD, Psychiatric Social Work, NIMHANS imparted his expertise on various mental health aspects and disorders and professional social work response with therapy and counselling. In the afternoon session, Mr.Venkatesh Murthy discussed scope of social work practices in different settings.

On Day two, 3 technical sessions were held on Specialization basis. Mrs. Anitha S, Faculty MSW, Bangalore University threw light on the theoretical and practical learning areas in Medical and Psychiatric Social work and various opportunities in different settings to work with individuals, group and community in physical and mental health arena.

Mr. Gangadhar Reddy, Faculty MSW, Dr.MSBCU addressed the technical session on scope of learning and practices of professional social work in community development and the need of social work trainees focusing on the quality requisites and challenges. In another session, Associate NRLM Mrs. Sujatha elaborated the current needs of learning in human resource management and employee relations and skills and qualities required for HR Professionals.

**-Dr. Dhamodhar A,**
Faculty, MSW




*VC Prof. Ramesh B, along with the dignitaries at the workshop*

# ಆರೋಗ್ಯ ಸಮಾಲೋಚನಾ ಶಿಬಿರ




ಉಚಿತ ಆರೋಗ್ಯ ಸಮಾಲೋಚನಾ ಶಿಬಿರದ ಉದ್ಘಾಟನಾ ಸಮಾರಂಭ

ಡಾ.ಎಂಎಸ್‌ಬಿಸಿಯು ಮಹಿಳಾ ಮಹಾವಿದ್ಯಾಲಯ, ಮಲ್ಲೇಶ್ವರಂ ಕಾಲೇಜಿನಲ್ಲಿ ಸೆಪ್ಟಂಬರ್ 11 ರಂದು ಶಿವಂ ಮದರ್ ಅಂಡ್ ಚೈಲ್ಡ್ ಕೇರ್ ಸಂಸ್ಥೆಯ ಸಹಯೋಗದೊಂದಿಗೆ ಮಹಿಳೆಯರ ಮತ್ತು ಹದಿಹರೆಯದವರ ವಿವಿಧ ಆರೋಗ್ಯ ಸಮಸ್ಯೆಗಳ ಪರಿಹಾರಕ್ಕಾಗಿ ವಿಶೇಷ ಉಚಿತ ಸಮಾಲೋಚನಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಕಾಲೇಜಿನ ಪ್ರಾಂಶುಪಾಲರಾದ ಡಾ. ಹೇಮಾಮಾಲಿನಿ ಶಿಬಿರವನ್ನು ಉದ್ಘಾಟಿಸಿದರು

ಈ ಶಿಬಿರದಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ. ವನಜಾ ಶಿವಕುಮಾರ್, ಡಾ. ಚೈತ್ರಾಯನ್ ಮತ್ತು ಕೌಟುಂಬಿಕ ವೈದ್ಯರಾದ ಡಾ.ಅಶ್ವಿನಿ ಅವರು ವೈದ್ಯಕೀಯ ತಪಾಸಣೆ ಮತ್ತು ಸಮಾಲೋಚನೆ ನಡೆಸಿದರು. ಅನುಭವಿ ಶುಶ್ರೂಷಕರಾದ ತೇಜಸ್ವಿನಿ ಮತ್ತು ಸಿಂಚನಾ ಅವರು ಈ ಶಿಬಿರದಲ್ಲಿ ಸೇವೆ ಸಲ್ಲಿಸಿದರು.

ಹದಿಹರೆಯದವರ ಮತ್ತು ಮಹಿಳೆಯರ ಆರೋಗ್ಯ ಸಮಸ್ಯೆಗಳಾದ ಪಿಸಿಓಎಸ್/ಪಿಸಿಓಡಿ ಮತ್ತು ಅನಿಯಮಿತ ಮುಟ್ಟಿನ ಸಮಸ್ಯೆಗಳು, ಮುಟ್ಟು ನಿಲ್ಲುವ ಮುನ್ನಿನ ಮತ್ತು ಮುಟ್ಟು ನಿಂತ ನಂತರದ ಆರೋಗ್ಯ ಏರುಪೇರುಗಳು, ಕಿಬ್ಬೊಟ್ಟೆಯ ಸೋಂಕು ಮತ್ತು ಇತರ ಸ್ತ್ರೀರೋಗ ಸಮಸ್ಯೆಗಳ ಬಗ್ಗೆ ತಪಾಸಣೆ ನಡೆಸಲಾಯಿತು. ರಕ್ತ ಪರೀಕ್ಷೆಗಳು ಮತ್ತು ಸ್ಕ್ಯಾನಿಂಗ್‌ಗಳ ಮೇಲೆ ಶೇಕಡಾ 20% ರಷ್ಟು ವಿಶೇಷ ರಿಯಾಯಿತಿ ನೀಡಲಾಗಿತ್ತು.

ಸುಮಾರು 400ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಪೋಷಕರು ವೈದ್ಯಕೀಯ ಸಮಾಲೋಚನೆ ಮತ್ತು ಆರೋಗ್ಯ ಮಾರ್ಗದರ್ಶನದ ಪ್ರಯೋಜನ ಪಡೆದರು. ಪ್ರಮುಖ ಆರೋಗ್ಯ ಸಮಸ್ಯೆಗಳನ್ನು ಗುರುತಿಸಿ, ಆಸ್ಪತ್ರೆಯ ಸಮಾಲೋಚನೆ, ಸ್ಕ್ಯಾನಿಂಗ್ ಮತ್ತು ಸೂಕ್ತ ಚಿಕಿತ್ಸೆಗಾಗಿ ಸೂಚಿಸಲಾಯಿತು. ವಿಶೇಷ ಮಾನಸಿಕ–ಆರೋಗ್ಯ ಬೆಂಬಲದ ಅಗತ್ಯವಿದ್ದವರನ್ನು ಮನೋವೈದ್ಯರ ಬಳಿಗೆ ಕಳುಹಿಸಲಾಯಿತು. ಎನ್.ಎಸ್.ಎಸ್ ಘಟಕದ ಸಂಚಾಲಕರಾದ ಉಪನ್ಯಾಸಕಿ ದೀಪ್ತಿ ಕೆ.ಎಚ್ ಮತ್ತು ಸಹ ಸಂಚಾಲಕರಾದ ಯಶ್ವಂತ್ ಎನ್.ಕೆ. ಕಾರ್ಯಕ್ರಮ ನಿರ್ವಹಣೆಗೆ ನೆರವಾದರು.

# ಅಂತಾರಾಷ್ಟ್ರೀಯ ಭಾಷಾಂತರ ದಿನಾಚರಣೆ – ಅನುವಾದ ಕಮ್ಮಟ



ಅಂತಾರಾಷ್ಟ್ರೀಯ ಭಾಷಾಂತರ ದಿನಾಚರಣೆ – ಅನುವಾದ ಕಮ್ಮಟವನ್ನು ಕುಲಪತಿಗಳೊಂದಿಗೆ ಉದ್ಘಾಟಿಸಿದ ಅತಿಥಿಗಳು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಮತ್ತು Dr. MSB-CU ಸಹಯೋಗದಲ್ಲಿ ಅಂತಾರಾಷ್ಟ್ರೀಯ ಭಾಷಾಂತರ ದಿನಾಚರಣೆಯ ಅಂಗವಾಗಿ ಸೆಂಟ್ರಲ್ ಕಾಲೇಜಿನ ನೂತನಶೈಕ್ಷಣಿಕವಿಭಾಗದಲ್ಲಿ "ಅನುವಾದ ಕಮ್ಮಟ" ಆಯೋಜಿಸಲಾಗಿತ್ತು.

ಕಮ್ಮಟವನ್ನು ಉದ್ಘಾಟಿಸಿ ಮಾತನಾಡಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಚನ್ನಪ್ಪ ಕಟ್ಟಿಯವರು "ಭಾಷಾ ವೈವಿಧ್ಯತೆ ಮತ್ತು ಭಾಷಾ ಹಕ್ಕುಗಳು" ಈ ಬಾರಿಯ ಅಂತಾರಾಷ್ಟ್ರೀಯ ಭಾಷಾಂತರ ದಿನಾಚರಣೆಯ ಧ್ಯೇಯವಾಕ್ಯ ವಾಗಿದೆ ಎಂದು ವಿವರಿಸಿದರು.

2017 ರಿಂದ ವಿಶ್ವಸಂಸ್ಥೆ ಆರಂಭಿಸಿರುವ ಅಂತಾರಾಷ್ಟ್ರೀಯ ಭಾಷಾಂತರ ದಿನಾಚರಣೆಯ ದಶಮಾನೋತ್ಸವ ಹಂತ ತಲುಪಿದ್ದು ಅನುವಾದ ವಿಶ್ವ ಸಾಹಿತ್ಯದ ನೆಲೆಗಟ್ಟಾಗಿದೆ ಎಂದು ಅವರು ತಿಳಿಸಿದರು.

"ಇಂಗ್ಲೀಷ್– ಕನ್ನಡ ಅನುವಾದ ಪ್ರಯೋಗದ ನೆಲೆಗಳು" ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದ ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ. ಬಂಜಗೆರೆ ಜಯಪ್ರಕಾಶ್ ಭಾಷಾಂತರದ ವಿವಿಧ ಸ್ವರೂಪಗಳನ್ನು ವಿವರಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯುನ್ಮಾನ ವಿಭಾಗದ ಮುಖ್ಯಸ್ಥರಾದ ಪ್ರೊ. ವಾಹಿನಿ ಅರವಿಂದ್ ರವರು "ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಭಾಷಾಂತರದ ಸವಾಲುಗಳು" ಎಂಬ ವಿಷಯದ ಕು–ರಿತು ಉಪನ್ಯಾಸ ನೀಡಿದರು.

ಕಮ್ಮಟದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್ .ಬಿ. ರವರು ಡಿಜಿಟಲ್ ಸಾಧನಗಳ ಅವಕಾಶ ಈಗ ಲಭ್ಯವಿದ್ದರೂ ಕೃತಕ ಬುದ್ಧಿಮತ್ತೆ ಮಾನವ ಸೃಜನಶೀಲತೆ ಸರಿಸಾಟಿಯಾಗದು ಎಂದು ಅಭಿಪ್ರಾಯಪಟ್ಟರು.

ಸಕಲ ಭಾಷೆಗಳಿಗೂ ಸಮಾನ ಗೌರವ ಲಭಿಸಬೇಕೆಂದು ಪ್ರತಿಪಾದಿಸಿದ ಅವರು ಯಾವುದೇ ಭಾಷೆಯ ಯಜಮಾನಿಕೆ ಬಹುತ್ವ ಸಂಸ್ಕೃತಿಗೆ ಪ್ರತಿಕೂಲವೆಂದು ತಿಳಿಸಿದರು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸಂಚಾಲಕರಾದ ಪ್ರೊ.ಡಿ.ಕೆ. ಚಿತ್ತಯ್ಯ ಪೂಜಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು ಜಾಗತಿಕ ಭಾಷೆಗಳ ಕೇಂದ್ರದ ನಿರ್ದೇಶಕರಾದ ಪ್ರೊ. ಜ್ಯೋತಿ ವೆಂಕಟೇಶ್ ರವರು ಸಮಾರೋಪ ಭಾಷಣ ಮಾಡಿದರು. ಡಾ.ಎಸ್.ಅಖ್ತರ್ ಕಾರ್ಯಕ್ರಮ ನಿರೂಪಿಸಿದರು. ಡಾ. ಗೋಪಿ ಮತ್ತು ಡಾ. ಪ್ರವೀಣ್ ಅತಿಥಿಗಳನ್ನು ಪರಿಚಯಿಸಿದರು. ಯದುಶ್ರೀ ಸ್ವಾಗತಿಸಿ ಪದ್ಮಜಾ ವಂದಿಸಿದರು.

# Youth Red Cross Training



Breastfeeding Awareness session at Youth Red Cross Training

The Youth Red Cross Cell of Dr.MSBCU, in association with the Indian Red Cross Society (IRCS), Bengaluru Urban District, organised a two-day training programme on "Disaster Management, First Aid, Life Skills Development and Orientation on Youth Red Cross" on September 18 and 19.

The session was inaugurated by Prof. B. Ramesh, Vice Chancellor. Balakrishna Shetty AB, Chairman, IRCS Bengaluru Urban; Prof. Ramesh B. Kudenatti, RE; and Vijayalakshmi, Finance Officer were present.

The sessions included YRC Orientation by Anand, First Aid and Emergency Response by Dr. Nagarajun K. P., Fire Safety and Live Demonstration by Inspector Parmesh KP and the High Grounds Fire Station team, and Disaster Management and Rescue Procedures by Inspector Rajib Daripa and the NDRF team.

The second day featured Breastfeeding Awareness and Maternal and Infant Health by Dr. Pallavi Utkarshas, Life Skills Training by Pooja and the NIMHANS team, and Cyber Security and Digital Awareness by CA Anil Bharadwaj.

The event was attended by Rtn. Murali Subramaniam of Rotary Bengaluru, Ms. Lalitha Krishna of Inner Wheel Bangalore. Dr. Govinda Gowda H. G., YRC Nodal Officer, and Sri. Mahesh Gowda, Secretary, IRCS Bengaluru Urban District.

# "COMERCIO" Forum Launched at University Collge for Women

The Department of Commerce at University College for Women, a constituent college of Dr. MSBCU launched its inaugural Commerce Forum, "COMERCIO", on September 10, 2026.

The forum was unveiled by the Principal in the presence of faculty and students from various disciplines.

The "Buzz Day" academic segment featured business idea presentations, a commerce quiz, and management games. Student-run stalls covering eateries, fashion, and beauty services offering hands-on experience in pricing, marketing, and customer interaction.




Commercio Commerce Form Lauched by Pricipal UCW Dr. Hemamalini

# Sociology Books Release Programme

The Department of Studies and Research in Sociology, Dr.MSB-CU,organised a Book Release Programme on 10th Sept. 2026

The programme was presided over by Prof. Jyoti Venkatesh, Dean of Arts Faculty. Prof. Adinarayanappa N. A., Professor of Sociology, Government Arts College, Bengaluru, graced the occasion as the Chief Guest.



Sociology Books Release Function at Dr.MSBCU by the dignitaries

The programme provided an important academic platform for recognising and encouraging scholarly writing and publication in Sociology. The three books released cover important areas of applied sociology, contemporary social issues and environmental sociology, thereby contributing to academic discussions and encouraging students and researchers to engage with changing social realities.

***1. Sociology in Action -Authors: Deepa S. V. &Dr. Savitha B. C.***

Sociology in Action highlights the relevance of sociological knowledge in understanding society and addressing contemporary social realities. The book emphasis on connecting sociological concepts and perspectives with social experiences, institutions and issues.

***2. Emerging Social Issues in India - Authors: Dr. Savitha B. C.,Dr. Sunil K. &Deepa***

This book focuses on emerging and contemporary social issues in the Indian context. It provides a sociological perspective for understanding changing social conditions, inequalities, transformations and challenges faced by different sections of Indian society.

***3. Sociology of Environment -Authors: Ravikumar K. &Deepa***

Sociology of Environment brings attention to the relationship between society and the environment from a sociological perspective. The subject is particularly significant in the context of climate change, environmental degradation, urbanisation, resource use and sustainable development.

-Dr. Savitha B C
-Faculty, Sociology

# ಕ್ರೀಡಾ ಸಾಧಕರಿಗೆ ಬಹುಮಾನ

Dr. MSBCU ದೈಹಿಕ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ಕ್ರೀಡಾ ವಾರ್ಷಿಕ ವೇಳಾಪಟ್ಟಿಯನ್ನು ಸಿದ್ದಪಡಿಸಲು ದಿನಾಂಕ:28–09–2026ರಂದು ಜ್ಞಾನಜ್ಯೋತಿ ಸಭಾಂಗಣದ ಸೆಮಿನಾರ್ ಹಾಲ್‌ನಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರ ಸಭೆಯನ್ನು ಆಯೋಜಿಸಲಾಗಿತ್ತು.

ಸುಮಾರು 36 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ಇತ್ತೀಚೆಗೆ ನಿವೃತ್ತರಾದ ಡಾ. ಶ್ರೀನಿವಾಸಲುರವರನ್ನು ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಪಿ.ಹೆಚ್.ಡಿ ಪದವಿಯನ್ನು ಪಡೆದ ದೈಹಿಕ ಶಿಕ್ಷಣ ನಿರ್ದೇಶಕರುಗಳಾದ ಡಾ. ಜಗದೀಶಯ್ಯ ಐ.ಸಿ., ಡಾ. ಮಹೇಶ್ ಪಿ.ಎಂ, ಡಾ. ಪ್ರಕಾಶ್.ಬಿ, ಡಾ. ಚಿರಂಜೀವಿ ಹಾಗೂ ಡಾ. ಪ್ರಮೀಳಾ ಬಿ.ಆರ್, ಅವರುಗಳನ್ನು ಅಭಿನಂದಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್ ಬಿ. ರವರು ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ನಗದು ಬಹುಮಾನಗಳನ್ನು ವಿತರಿಸಿದರು.

ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ನಿರ್ದೇಶಕರಾದ ಗಿರೀಶ್.ಎನ್. ಸ್ವಾಗತಿಸಿದರು. ಡಾ.ಜಗದೀಶಯ್ಯ ವಂದಿಸಿದರು. ಡಾ. ಆಶಾ ಕಾರ್ಯಕ್ರಮ ನಿರೂಪಿಸಿದರು.



ಕ್ರೀಡಾ ಸ್ಪರ್ಧೆಗಳಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ನಗದು ಬಹುಮಾನ ವಿತರಣೆ

## ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆ

‘ಅನಿಕೇತನ’ ವಾರ್ಷಿಕ ವಿಶೇಷ ಸಂಚಿಕೆಯ ಪ್ರತಿಭಾನ್ವೇಷಣೆ ಸ್ಪರ್ಧೆಗಳ ನೋಂದಣಿಗೆ ಅಂತಿಮ ದಿನಾಂಕವನ್ನು 05–10–2026 ರವರೆಗೆ ವಿಸ್ತರಿಸಲಾಗಿದೆ. ಅಂದು ಮಧ್ಯಾಹ್ನ 2 ರಿಂದ 5 ರವರೆಗೆ ಸಿ.ವಿ.ರಾಮನ್ ಹಾಲ್ ನಲ್ಲಿ ಪ್ರಬಂಧ, ಕಾರ್ಟೂನ್, ಪೋಸ್ಟರ್ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಸಣ್ಣ ಕಥೆ, ಕವನ. ಹನಿಗವನ, ಛಾಯಾಚಿತ್ರಗಳನ್ನು 15–10–2026ರೊಳಗೆ ಕಳುಹಿಸಬಹುದು.

QR CODE

**ಸಂಪಾದಕೀಯ ಮಂಡಳಿ**

**ಡಾ. ಟಿ. ಎನ್. ತಾಂಡವ ಗೌಡ**
ಪ್ರಸಾರಾಂಗ ನಿರ್ದೇಶಕರು.
**ಎಸ್. ಆರ್. ಆರಾಧ್ಯ**
ಮಾಧ್ಯಮ ಸಮಾಲೋಚಕರು.
**ಡಾ. ಪ್ರವೀಣ ಡಿ.ಎಸ್.**
**ಡಾ. ಮರಿಸ್ವಾಮಿ.**
**ಡಾ. ತೇಜಸ್ವಿನಿ ದೇವಕುಮಾರ್.**
**ಡಾ. ಶ್ರೀನಿವಾಸ್ ಸಿ.ಎನ್.**
**ಡಾ. ನಾಜಿಯಾ ಕೌಸರ್.**
**ಗಾಯಿತ್ರಿ ವೈ.**
**ಸರ್ವಜಿತ್ ಕುಮಾರ್ ಜೆ.ಎನ್.**
(ಪುಟ ವಿನ್ಯಾಸಕರು)
**ಪುನೀತ್ ಡಿ.**
(ತಾಂತ್ರಿಕ ಸಹಾಯಕರು)

**ಮಾರ್ಗದರ್ಶಕ ಮಂಡಳಿ**

**ಪ್ರೊ. ರಮೇಶ್. ಬಿ**
ಮಾನ್ಯ ಕುಲಪತಿಗಳು.
**ನವೀನ್ ಜೋಸೆಫ್. ಎ**
ಮಾನ್ಯ ಕುಲಸಚಿವರು.
**ಪ್ರೊ.ರಮೇಶ.ಬಿ. ಕುಡೇನಟ್ಟಿ**
ಕುಲಸಚಿವರು–ಮೌಲ್ಯಮಾಪನ.
**ಎಂ.ವಿ. ವಿಜಯಲಕ್ಷ್ಮಿ**
ಮಾನ್ಯ ವಿತ್ತಾಧಿಕಾರಿಗಳು.
**ಪ್ರೊ. ಕೆ.ಆರ್.ಜಲಜಾ**
ಡೀನರು, ಶಿಕ್ಷಣ ನಿಕಾಯ
**ಪ್ರೊ. ಜ್ಯೋತಿ ವೆಂಕಟೇಶ್**
ಡೀನರು, ಕಲಾ ನಿಕಾಯ.
**ಪ್ರೊ. ಪಿ. ಆರ್. ಚೇತನ**
ಡೀನರು, ವಿಜ್ಞಾನ ನಿಕಾಯ.
**ಪ್ರೊ. ನಿರ್ಮಲ. ಎಂ**
ಡೀನರು, ವಾಣಿಜ್ಯ ನಿಕಾಯ

**ವಿದ್ಯಾರ್ಥಿ ಸಂಪಾದಕರು**

ಸ್ವಾತಿ, ಎಂಸಿಜೆ, ದ್ವಿತೀಯ
ನಯನ, ಎಂಸಿಜೆ, ಪ್ರಥಮ
ಅಮೂಲ್ಯ. ಎ(UCW), ಬಿ.ಎ.ಅಂತಿಮ